**DW-1:** ಕಮಲಮ್ಮ

ದಿನಾಂಕಃ **24.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎನ್.ಎನ್.ಆರ್. ವಕೀಲರಿಂದಃ</u>

1. ದಾವಾ ಸ್ವತ್ತುಗಳು ಮೊದಲಿಗೆ ಹನುಮಂತರಾಯ ಮತ್ತು ಲಕ್ಷ್ಮಮ್ಮ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನ್ನ ಗಂಡ ತನ್ನ ತಾಯಿಯಾದ ಲಕ್ಷ್ಮಮ್ಮ ರವರ ಹೆಸರಿಗೆ ಖರೀದಿಸಿರುತ್ತಾರೆ. ನನ್ನ ಅತ್ತೆಯ ಹೆಸರು ಲಕ್ಷ್ಮಮ್ಮ. ಲಕ್ಷ್ಮಮ್ಮ ರವರಿಗೆ 5 ಜನ ಮಕ್ಕಳು ಅವರೆಂದರೆ ಆನಂದಚಾರಿ, ಷಣ್ಮುಖಚಾರಿ ಮತ್ತು ಶಂಕರಚಾರಿ ಶಾರದಮ್ಮ ಮತ್ತು ವೆಂಕಟಲಕ್ಷ್ಮಮ್ಮ. ಲಕ್ಷ್ಮಮ್ಮ ರವರ ಮಕ್ಕಳ ಪೈಕಿ ಆನಂದಚಾರಿ ಮತ್ತು ಶಂಕರಚಾರಿ ಸರ್ಕಾರಿ ನೌಕರರಾಗಿದ್ದರು. ದಾವಾ ಸ್ವತ್ತುಗಳನ್ನು ಖರೀದಿ ಮಾಡುವ ಮೊದಲು ಅವರು ಸರ್ಕಾರಿ ನೌಕರಿಯಲ್ಲಿದ್ದರು. ಸರ್ಕಾರಿ ನೌಕರಿಯಲ್ಲಿ ಇದ್ದ ಕಾರಣ ಆನಂದಚಾರಿ ಮತ್ತು ಶಂಕರಚಾರಿ ಕೆಲಸದ ಸ್ಥಳಗಳಲ್ಲಿ ವಾಸವಿದ್ದ ಅಲ್ಲಿಂದಲೇ ಲಕ್ಷ್ಮಮ್ಮ ರವರು ಮನೆಯ ಯಜಮಾನಿಯಾಗಿ ಒಟ್ಟು ಕುಟುಂಬವನ್ನು ನಡೆಸುವ ಸಲುವಾಗಿ ಹಣ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಷಣ್ಮುಖಚಾರಿ ಏನು ಕೆಲಸ ಮಾಡುತ್ತಿರಲಿಲ್ಲ ಊರಿನಲ್ಲಿ ಇದ್ದರು. ಶಂಕರಚಾರಿ, ಆನಂದಚಾರಿ, ಶಂಕರಚಾರಿ ಮತ್ತು ಷಣ್ಮುಖಚಾರಿ ರವರಿಗೆ ಒಂದೇ ಮನೆ ಇತ್ತು ಎಂದರೆ ಸರಿ. ಅವರು ಬಂದಾಗ ನಮ್ಮ ಮನೆಯಲ್ಲೇ ಒಟ್ಟಿಗೆ ಇರುತ್ತಿದ್ದರು ಎಂದರೆ ಸರಿ.

2. ಲಕ್ಷ್ಮಮ್ಮ ರವರೇ ಒಟ್ಟು ಕುಟುಂಬವನ್ನು ನಿಭಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಶಂಕರಚಾರಿ ಮತ್ತು ಆನಂದಚಾರಿ ಸರ್ಕಾರಿ ನೌಕರರಾಗಿದ್ದು ಅವರು ನೀಡಿದ ಹಣದಿಂದಲೇ ತಾಯಿ ಲಕ್ಷ್ಮಮ್ಮ ರವರ ಹೆಸರಿಗೆ ಸ್ವತ್ತುಗಳನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೊದಲಿಗೆ ಒಟ್ಟಾರೆಯಾಗಿ ಸ.ನಂ. 118 ಇತ್ತು ಎಂದರೆ ಸರಿ. ಸ್ವತ್ತನ್ನು ಯಾರಿಂದ

ಖರೀದಿ ಮಾಡಲಾಗಿದೆ ಎಂದು ಗೊತ್ತಿಲ್ಲ. ಲಕ್ಷ್ಮಮ್ಮ ರವರು ಅನಕ್ಷರಸ್ಥರು ಎಂದರೆ ಸರಿ. ಲಕ್ಷ್ಮಮ್ಮ ರವರು ಮೃತಪಟ್ಟು 60 ವರ್ಷ ಆಗಿರುತ್ತದೆ. ನನ್ನ ಅತ್ತೆ ಮೃತಪಟ್ಟು 30 ವರ್ಷ ಆಗಿರುತ್ತದೆ. ಅವರು ಮೃತಪಡುವ ಕಾಲಕ್ಕೆ ಸುಮಾರು 90 ವರ್ಷ ವಯಸ್ಸಾಗಿತ್ತು ಎಂದರೆ ಗೊತ್ತಿಲ್ಲ. ಆನಂದಚಾರಿಗೆ ಒಬ್ಬನೇ ಮಗ. ಆನಂದಚಾರಿಯ ಪತ್ನಿಯ ಹೆಸರು ಆದಿಲಕ್ಷ್ಮಮ್ಮ. ಷಣ್ಮುಖಚಾರಿಗೆ 5 ಜನ ಮಕ್ಕಳು ಅವರೆಂದರೆ ರಾಮಾಂಜಿನೇಯ, ಹನುಮಂತರಾಯ, ಸಾವಿತ್ರಮ್ಮ, ಭಾರತಿ ಮತ್ತು ಮಣಮ್ಮ. ಶಾರದಮ್ಮ ರವರ ಮಗನ ಹೆಸರು ಗೊತ್ತಿಲ್ಲ. ಶಂಕರಚಾರಿ ರವರ ಹೆಂಡತಿ ಮತ್ತು ಮಕ್ಕಳ ಹೆಸರು ಗೊತ್ತಿಲ್ಲ.

3. ಊಯಿಲು ಬರೆದಿರುವ ಮನೆ ನನ್ನ ಗಂಡನ ಹೆಸರಿನಲ್ಲಿ ಇತ್ತು. ಆ ಸ್ವತ್ತನ್ನು ನನ್ನ ಗಂಡ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಸ್ವತ್ತು ನಮ್ಮ ಗಂಡನ ಪಿತ್ರಾರ್ಜಿತ ಆಸ್ತಿ ಎಂಬುದು ಸರಿಯಲ್ಲ. ಲಕ್ಷ್ಮಮ್ಮ ಊಯಿಲು ಬರೆದಿದ್ದಾರೆ ಎಂದು ಹೇಳುವ ಆಸ್ತಿ ಪಿತ್ರಾರ್ಜಿತ ಮನೆ ಎಂಬುದು ಸರಿಯಲ್ಲ. ಬೇರೆ ಮನೆ ಇರುತ್ತದೆ. ಲಕ್ಷ್ಮಮ್ಮ ಮತ್ತು ಹನುಮಂತರಾಯಪ್ಪ ರವರಿಗೆ ಮನೆ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ ಎಂದರೆ ಸರಿ.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.